**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮಂಡ್ಯ.**

**ಎಸ್ ಸಿ ಕೇಸ್ ನಂ.123/2024**

ಪ್ರಾ.ಸಾ. 12

ಚಾ.ಸಾ. 19

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಿದ ದಿನಾಂಕ 28.02.2026**

ಸಾಕ್ಷಿದಾರರ ಹೆಸರು ಗುರು.ಸಿ.ಜಿ.

ತಂದೆಯ ಹೆಸರು ಗೋಪಾಲ

ವಯಸ್ಸು 29 ವರ್ಷ

ಉದ್ಯೋಗ ಡ್ರೈವರ್ ಕೆಲಸ

ವಾಸ ಕೊಂಗಬೋರನದೊಡ್ಡಿ ಗ್ರಾಮ

**ಮುಖ್ಯ ವಿಚಾರಣೆಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

1. ನಾನು ಈಗ ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದೆ. ಸಾಕ್ಷಿ ಆರೋಪಿಗಳ ಬಳಿಯಿಂದ ಮೊಬೈಲ್ ಅಮಾನತ್ತು ಪಂಚನಾಮೆ ನೋಡಿ ತನ್ನ ಸಹಿ ಗುರುತಿಸಿದ ಕಾರಣ ಅದನ್ನು ನಿಪಿ.20 ಎಂದು, ಸಾಕ್ಷಿಯ ಸಹಿಯನ್ನು ನಿಪಿ.20 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಮದ್ದೂರು ಪೊಲೀಸ್ ಠಾಣೆಯಲ್ಲಿ 6-7 ವರ್ಷಗಳ ಹಿಂದೆ ಮಾಡಿದ್ದೇನೆ. ಮಹಜರು ಕಾಲಕ್ಕೆ ಆ ಸಹಿ ಮಾಡಿದ್ದೇನೆ. ಪೊಲೀಸರು ಮಹಜರು ಎಂದು ಹೇಳಿ ನನ್ನ ಸಹಿ ಪಡೆದರು. ಆ ಕಾಲಕ್ಕೆ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಲ್ಲ. ನನ್ನ ಜೊತೆ ಸುಹಾಸ್ ಚಾಸಾ.20 ಕೂಡ ಸಹಿ ಮಾಡಿದ್ದಾನೆ. ಸದರಿ ಸಹಿಯನ್ನು ನಾನು ಮದ್ಯಾಹ್ನ ಮಾಡಿದ್ದೇನೆ. ನ್ಯಾಯಾಲಯದ ಮುಂದಿರುವ ಆರೋಪಿತರ ಪೈಕಿ ನಾನು ನಿಪಿ.20 ಕ್ಕೆ ಸಹಿ ಮಾಡುವಾಗ ಠಾಣೆಯಲ್ಲಿ ಅವರು ಯಾರೂ ಇರಲಿಲ್ಲ. ಅವರನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ. ನಾನು ಈಗ ನೋಡುತ್ತಿರುವ ಫೊಟೋದಲ್ಲಿ ನಾನು ಇದ್ದೇನೆ. ಸಾಕ್ಷಿ

ಸದರಿ ಫೋಟೋವನ್ನು ಗುರುತಿಸಿದ ಕಾರಣ ಅದನ್ನು ನಿಪಿ.21 ಎಂದು ಗುರುತಿಸಲಾಯಿತು. ಸದರಿ ಫೋಟೋವನ್ನು ಮದ್ದೂರು ಪೊಲೀಸ್ ಠಾಣೆಯಲ್ಲಿ ನಾನು ನಿಪಿ.20 ಕ್ಕೆ ಸಹಿ ಮಾಡಿದ ದಿವಸ ತೆಗೆದಿದ್ದಾರೆ. ಸದರಿ ಫೋಟೋದಲ್ಲಿ ಚಾಸಾ.20 ಇದ್ದಾರೆ. ಅಲ್ಲದೆ ಅದರಲ್ಲಿ 2 ನೇ ಆರೋಪಿ ಹನುಮಂತ ಕೂಡ ಇದ್ದಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ನೋಡಿ ಇವರೂ ಕೂಡ ನಿಪಿ.21 ಫೋಟೋದಲ್ಲಿ ಕಾಣುತ್ತಿದ್ದಾರೆ. ಚಾಸಾ.20 ಮತ್ತು 2 ನೇ ಆರೋಪಿಯನ್ನು ಬಿಟ್ಟು ಅದರಲ್ಲಿರುವ ಉಳಿದವರು ಯಾರು ಎಂದು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮೊಬೈಲುಗಳನ್ನು ಅಮಾನತ್ತುಪಡಿಸಿಲ್ಲ. ಈ ಹಂತರದಲ್ಲಿ ಸಾಕ್ಷಿಗೆ ಮೂಲ ಎಸ್ ಸಿ ಸಂಖ್ಯೆ 54/2020 ರಲ್ಲಿ ಗುರುತಿಸಿದ ಮು.ಮಾ.8 ರಿಂದ ಮು.ಮಾ.10 ಮೊಬೈಲುಗಳನ್ನು ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಸದರಿ ಮೊಬೈಲುಗಳನ್ನು ನನ್ನ ಸಮಕ್ಷಮ ಅಮಾನತ್ತುಪಿಡಿಸಿಲ್ಲ ಎಂದು ನುಡಿಯುತ್ತಾರೆ. ನಾನು ನೋಡಿದ ಮಹಜರಿನಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆ ಮಾಡಿಕೊಂಡಿಲ್ಲ.

(ಈ ಹಂತದಲ್ಲಿ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಪ್ರಭಾರ ಸರ್ಕಾರಿ ಅಭಿಯೋಜಕರವರಿಂದಃ**

2. ದಿನಾಂಕ 04.07.2019 ರಂದು ಮದ್ದೂರು ವೃತ್ತ ನಿರೀಕ್ಷಕರ ಕಛೇರಿಗೆ ನನ್ನನ್ನು ಸಂಜೆ 5.00 ಗಂಟೆಗೆ ಕರೆಸಿ, ನ್ಯಾಯಾಲಯದ ಮುಂದಿರುವ 2 ಮತ್ತು 3 ಹಾಗೂ ಗೈರು ಹಾಜರು ಇರುವ 1 ನೇ ಆರೋಪಿಗಳ ಸಮಕ್ಷಮ ಅವರು ತಮ್ಮ ವಶದಲ್ಲಿದ್ದ ಈಗ ನನಗೆ ತೋರಿಸಿದ ಮುದ್ದೆ ಮಾಲುಗಳ ಪೈಕಿ ಮು.ಮಾ.8 ನ್ನು 1 ನೇ ಆರೋಪಿಯಿಂದ, ಮು.ಮಾ.9 ನ್ನು 2 ನೇ ಆರೋಪಿಯಿಂದ, ಮು.ಮಾ.10 ನ್ನು 3 ನೇ ಆರೋಪಿಯಿಂದ ವಶಪಡಿಸಿಕೊಂಡು ಸಂಜೆ 5.00 ರಿಂದ 5.30 ಗಂಟೆವರೆಗೆ ನಿಪಿ.20 ರಂತೆ ಮಹಜರು ಕ್ರಮ ಜರುಗಿಸಿ, ನನ್ನ ಸಹಿಯನ್ನು ಪಡೆದರು ಎಂದರೆ ಸರಿಯಲ್ಲ. ನನ್ನ ಜೊತೆ ಸುಹಾಸ್ ಕೂಡ ಹಾಜರು ಇದ್ದು, ನಾವಿಬ್ಬರೂ ಆರೋಪಿಗಳು ಮೊಬೈಲುಗಳನ್ನು ಹಾಜರುಪಡಿಸುವಾಗ ಹಾಜರು ಇದ್ದೆವು ಎಂದರೆ ಸರಿಯಲ್ಲ. ಆ ಕಾಲಕ್ಕೆ

ನಿಪಿ.21 ರಂತೆ ಫೋಟೋ ತೆಗೆದಿದ್ದಾರೆ ಎಂದರೆ ಸಾಕ್ಷಿ ನನ್ನ ಎದುರು ಏನೂ ಕೊಡಲಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 24.07.2019 ರಂದು ನಾನು ಹೇಳಿಕೆ ನೀಡಿ, ಆ ಹೇಳಿಕೆಯಲ್ಲಿ ಎಲ್ಲಾ ಆರೋಪಿತರು ರಾಕೇಶ್ ಅಲಿಯಾಸ್ ರಾಕಿ ಎಂಬುವವನ್ನು ಕೊಲೆ ಮಾಡಿದ್ದಾರೆ ಎಂಬ ವಿಚಾರ ನನಗೆ ತಿಳಿಯಿತು ಎಂದು ಹೇಳಿದ್ದೇನೆಂದರೆ ಸರಿ. ನನ್ನ ಸಮಕ್ಷಮ ಪೊಲೀಸರು ಮೊಬೈಲನ್ನು ಅಮಾನತ್ತುಪಡಿಸಿಕೊಂಡಿದ್ದರೂ ಆರೋಪಿಗಳಿಗೆ ಸಹಾಯ ಮಾಡಲು ಅಮಾನತ್ತುಪಡಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಹೆಚ್ ಪಿ ವಕೀಲರಿಂದಃ**

ಪಾಟೀ ಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ.)

ಓ.ಹೇ.ಕೇ.ಸ.ಒ.

(ಯಾದವ ಕೆ.)
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮಂಡ್ಯ.